# Laksha Deepostsava - 2011



## LAKSHA DEEPOTSAVA SAMITHI, SRI MATH, SRINGERI.

*Distinguished devotees,*

It is with great pleasure we inform you that this year's Laksha Deepotsava is being celebrated on Sunday, 21st November. It has been our privilege to celebrate this auspicious function for the past ten years with the benign blessings of Sri Sringeri Jagadguru Shankaracharya, Sri Sri Bharatiteertha Mahaswamiji and under the inspiring leadership of Gurusevadhureena Padmashri Dr. V R Gowrishankar, Administrator and CEO of Srimath. This is a unique occasion where hundred thousand lamps will be lit to worship the deities in which Sri Jagadguru Bharatiteertha Mahaswamiji will personally participate and bless the devotees.

Light holds a pre-eminent position in the cultural heritage of India. It is the symbol of auspiciousness, learning, and enlightenment. It signifies our eternal journey from darkness to light, from mortality to immortality, from ignorance to awareness. It is considered as the very manifestation of the supreme divinity that removes all our sins. There is no house, no day, and no festival without the lighted lamps. Karthika is celebrated as the month of lights, in every temple lights are lit and the deities worshipped. It is considered as the most sacred act to offer the Deepa Seva to the gods in this month.

Even though Deepotsava is celebrated throughout the Karthika month, the one on the Purnima day is held most propitious. More than a hundred thousand lamps will be lighted in all the temples of Sringeri and on both sides of the road from Sri Malahanikareshwara temple to Srimath premises. Sringeri will be dazzling with the golden hue of the innumerable lights lit by the devotees.

This year is historic as it is the 60th year of the birth of Sri Sri Jagadguru Bharatiteertha Mahaswamiji. It is our duty to celebrate it with piety. Bhagavan Sri Krishna has stated in the Bhagavadgita that the gods worshipped with yagas will bless us by showering us with good rains, prosperity, wealth, peace. This has been the general experience too. Keeping these facts in view, we, with the gracious blessings of Sri Jagadguru, have envisaged arranging Sri Maharudra Yaga in Sri Malahanikareshwara temple on this momentous occasion. The regular features like honouring those who are serving the society silently, devotional programmes will stay. We request you to wholeheartedly take part in these programmes.

To facilitate wide participation, multiplicity of sponsoring is planned. Contribution for each lamp is Rs. 5 /-only. Arrangements are made for those offering Rs. 10,000 (2000 lamps), Rs. 5000/- (1000 lamps), Rs.2500/- (500 lamps) and Rs. 1000/- (200 lamps) to offer seva with Sankalpa. For Sri Maharudra Yaga Kanike is Rs 250/- for Ekavara Rudra, Rs. 1500/- for Ekadashavara Rudra and Rs. 5000/- for Shatharudra. Devotees can also offer in kind like oil, wick, Naivedyam articles etc.

Contributions may kindly be sent by DD or Cheque drawn favouring The President, Laksha Deepotsava Samithi, Sri Math, Sringeri. Arrangements for sending prasadams by post are made for those devotees who cannot be present personally.

This is our function. Therefore, we appeal to you to join us in making it a grand success and thus be the recipients of divine grace and the blessings of Sri Jagadguru.

**V.R.Gowrishankar**
Honorary President and
Office bearers and Members
Laksha Deepotsava Samithi, Sri Math, Sringeri

# ಲಕ್ಷದೀಪೋತ್ಸವ ಸಮಿತಿ, ಶ್ರೀಮಠ, ಶೃಂಗೇರಿ

ಈ ವರ್ಷದ ಲಕ್ಷದೀಪೋತ್ಸವವನ್ನು ನವಂಬರ್ 21, ಭಾನುವಾರ, ಕಾರ್ತಿಕ ಪೂರ್ಣಿಮೆಯಂದು ಆಚರಿಸಲಾಗುವುದೆಂದು ತಿಳಿಸಲು ಹರ್ಷಿಸುತ್ತೇವೆ. ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಿಪೂರ್ಣ ಅನುಗ್ರಹದಿಂದಲೂ, ಶ್ರೀಮಠದ ಆಡಳಿತಾಧಿಕಾರಿಗಳಾದ ಗುರುಸೇವಾಧುರೀಣ ಪದ್ಮಶ್ರೀ ಡಾ. ವಿ ಆರ್ ಗೌರೀಶಂಕರ್ ಅವರ ಸಮರ್ಥ ಸಾರಥ್ಯದಲ್ಲೂ ಕಳೆದ ಹತ್ತು ವರ್ಷಗಳಿಂದಲೂ ನಿರಂತರವಾಗಿ ಈ ಉತ್ಸವವನ್ನು ನಡೆಸಿಕೊಂಡುಬರುತ್ತಿರುವ ಭಾಗ್ಯ ನಮ್ಮದಾಗಿದೆ. ಲಕ್ಷಾಂತರ ದೀಪಗಳನ್ನು ಬೆಳಗಿ ಭಗವದಾರಾಧನೆ ನಡೆಸುವ ಈ ಪವಿತ್ರ ಉತ್ಸವದಲ್ಲಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ತಮ್ಮ ಸಾನ್ನಿಧ್ಯದಿಂದ ನಮ್ಮನ್ನು ಅನುಗ್ರಹಿಸಲಿದ್ದಾರೆ.

ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ದೀಪಗಳು ಸರ್ವಶ್ರೇಷ್ಠ ಸ್ಥಾನವನ್ನು ಹೊಂದಿವೆ. ದೀಪ ಪಾವಿತ್ರ್ಯದ, ಮಂಗಳದ, ಜ್ಞಾನದ ಸಂಕೇತ. ಅದು ಕತ್ತಲಿನಿಂದ ಬೆಳಕಿನೆಡೆಗೆ, ಮರ್ತ್ಯತೆಯಿಂದ ಅಮರತ್ವದೆಡೆಗೆ, ಅಜ್ಞಾನದಿಂದ ಜ್ಞಾನದೆಡೆಗೆ ನಮ್ಮ ಸತತ ಚಲನೆಯನ್ನು ಪ್ರತಿನಿಧಿಸುತ್ತದೆ. ನಮ್ಮೆಲ್ಲ ಪಾಪಗಳನ್ನು ನಿವಾರಿಸುವ ಪರಮ ದೈವ ಸ್ವರೂಪವೇ ಅದಾಗಿದೆ. ದೀಪ ಬೆಳಗದ ಮನೆಯಿಲ್ಲ, ದಿನವಿಲ್ಲ, ಉತ್ಸವವಿಲ್ಲ. ಕಾರ್ತಿಕ ಮಾಸ ದೀಪಗಳ ಮಾಸ. ಈ ತಿಂಗಳಿನಲ್ಲಿ ಎಲ್ಲಾ ದೇವಾಲಯಗಳಲ್ಲೂ ದೀಪಗಳನ್ನು ಬೆಳಗಿ ಉತ್ಸವ ನಡೆಸಲಾಗುತ್ತದೆ. ಈ ತಿಂಗಳಿನಲ್ಲಿ ದೀಪಸೇವೆಯ ಮೂಲಕ ಭಗವದಾರಾಧನೆಗೆ ಬಹಳ ಮಹತ್ತ್ವವಿದೆ.

ಯದ್ಯಪಿ ಕಾರ್ತಿಕ ಮಾಸದ ಎಲ್ಲಾ ದಿನಗಳೂ ದೀಪೋತ್ಸವಕ್ಕೆ ವಿಹಿತವಾಗಿದ್ದರೂ ಪೂರ್ಣಿಮೆಯದಿನ ಅತ್ಯಂತ ಪ್ರಶಸ್ತವೆಂದು ಪರಿಗಣಿತವಾಗಿದೆ. ಈ ದಿನದಂದು ಶ್ರೀ ಮಲಹಾನಿಕರೇಶ್ವರ ದೇವಾಲಯದಿಂದ ಶ್ರೀಮಠದ ಆವರಣದವರೆಗೆ ರಸ್ತೆಯ ಎರಡೂ ಬದಿಗಳಲ್ಲೂ, ಎಲ್ಲಾ ದೇವಾಲಯಗಳಲ್ಲೂ ಒಂದು ಲಕ್ಷಕ್ಕೂ ಮಿಕ್ಕಿ ದೀಪಗಳನ್ನು ಬೆಳಗಿ ದೀಪೋತ್ಸವವನ್ನು ಆಚರಿಸಲಾಗುವುದು. ಭಕ್ತರು ಬೆಳಗಲಿರುವ ಸುವರ್ಣಜ್ಯೋತಿಯ ಪ್ರಕಾಶದಲ್ಲಿ ಶೃಂಗೇರಿಯು ಬೆಳಗಲಿದೆ.

ಈ ವರ್ಷ ಒಂದು ಐತಿಹಾಸಿಕ ವರ್ಷ. ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಷಷ್ಟ್ಯಬ್ದ. ಈ ವಿಶೇಷ ಸಂದರ್ಭವನ್ನು ನಾವು ಭಕ್ತಿ ಶ್ರದ್ಧೆಗಳಿಂದ ಆಚರಿಸಬೇಕಾದದ್ದು ನಮ್ಮ ಕರ್ತವ್ಯ. ಯಜ್ಞಗಳಿಂದ ತೃಪ್ತರಾದ ದೇವತೆಗಳು ಸುವೃಷ್ಟಿ, ಸಂಪತ್ತು, ಶಾಂತಿ ಸಮಾಧಾನ, ಶ್ರೇಯಸ್ಸುಗಳನ್ನು ನಮಗೆ ಅನುಗ್ರಹಿಸುತ್ತಾರೆಂದು ಭಗವಾನ್ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ

ಅರ್ಪಣೆಮಾಡಿದ್ದಾನೆ. ಅದು ಲೋಕದ ಅನುಭವವೂ ಹೌದು. ಈ ಎರಡೂ ಕಾರಣಗಳಿಂದ ಈ ವರ್ಷದಿಂದ ತೊಡಗಿ ಶ್ರೀ ಮಲಹಾನಿಕರೇಶ್ವರ ಸನ್ನಿಧಿಯಲ್ಲಿ ಶ್ರೀ ಮಹಾರುದ್ರ ಯಾಗವನ್ನು ಮಾಡಬೇಕೆಂದು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ದಿವ್ಯಾಶೀರ್ವಾದಗಳನ್ನು ಪಡೆದು ನಿಶ್ಚಯಿಸಿದ್ದೇವೆ. ಅಲ್ಲದೇ ಪ್ರತಿವರ್ಷದಂತೆ ಎಲೆಮರೆಯ ಕಾಯಿಗಳಂತೆ ಸಮಾಜದ ಸೇವೆ ಸಲ್ಲಿಸುತ್ತಿರುವ ಮಹನೀಯರನ್ನು ಸನ್ಮಾನಿಸುವ, ಲೋಕಕಲ್ಯಾಣಕರವಾದ ಕಾರ್ಯಗಳನ್ನು ಹಮ್ಮಿಕೊಳ್ಳಲಿದ್ದೇವೆ. ತಾವು ಈ ಮಂಗಳಕಾರ್ಯದಲ್ಲಿ ಭಕ್ತಿ ಉತ್ಸಾಹಗಳೊಂದಿಗೆ ಭಾಗವಹಿಸಬೇಕೆಂದು ಕೋರುತ್ತೇವೆ.

ಈ ಪಾವನಕರವಾದ ಉತ್ಸವದಲ್ಲಿ ಅತಿ ಹೆಚ್ಚು ಜನರು ಭಾಗವಹಿಸಲು ಅನುಕೂಲವಾಗುವಂತೆ ಕಾಣಿಕೆಗಳನ್ನು ನಿಗದಿಪಡಿಸಲಾಗಿದೆ. ಶ್ರೀ ಮಹಾರುದ್ರಯಾಗದಲ್ಲಿ ಏಕವಾರ ರುದ್ರಕ್ಕೆ ರೂ 250/-, ಏಕಾದಶವಾರರುದ್ರಕ್ಕೆ ರೂ 1500/- ಮತ್ತು ಶತರುದ್ರಕ್ಕೆ ರೂ 5000/- ಗಳಂತೆಯೂ, ದೀಪೋತ್ಸವದಲ್ಲಿ ಪ್ರತಿ ದೀಪಕ್ಕೆ ರೂ 5/- ಕಾಣಿಕೆ ನಿಗದಿಪಡಿಸಲಾಗಿದೆ. 200 ದೀಪಗಳಿಗೆ ರೂ 1000/-, 500 ದೀಪಗಳಿಗೆ ರೂ 2500/- 1000 ದೀಪಗಳಿಗೆ ರೂ 5000/-, 2000 ದೀಪಗಳಿಗೆ ರೂ 10,000/- ಪ್ರಾಯೋಜಕಕಾಣಿಕೆ ನೀಡುವವರಿಗೆ ಸಂಕಲ್ಪ ಮಾಡಿಸುವ ವ್ಯವಸ್ಥೆ ಮಾಡಲಾಗಿದೆ. ಭಕ್ತರು ಎಣ್ಣೆ, ಬತ್ತಿ ಹಾಗೂ ನೈವೇದ್ಯವಸ್ತುಗಳ ರೂಪದಲ್ಲೂ ಸೇವೆ ಸಲ್ಲಿಸಬಹುದಾಗಿದೆ. ಅಲ್ಲದೇ ಭಕ್ತರು ನೀಡುವ ಯಾವುದೇ ಮೊತ್ತವನ್ನೂ ಸ್ವೀಕರಿಸಲಾಗುವುದು.

ಭಕ್ತರು ತಮ್ಮ ಕಾಣಿಕೆಯನ್ನು ಅಧ್ಯಕ್ಷರು, ಲಕ್ಷದೀಪೋತ್ಸವ ಸಮಿತಿ, ಶ್ರೀ ಶಾರದಾ ಪೀಠಂ, ಶೃಂಗೇರಿ – ಈ ವಿಳಾಸಕ್ಕೆ ಡಿಡಿ ಅಥವಾ ಚೆಕ್ ಮೂಲಕ ಕಳುಹಿಸಬಹುದು. ಪ್ರತ್ಯಕ್ಷವಾಗಿ ಭಾಗವಹಿಸಲಾಗದೆ ಭಕ್ತರಿಗೆ ಅಂಚೆಯ ಮೂಲಕ ಪ್ರಸಾದವನ್ನು ಕಳುಹಿಸುವ ವ್ಯವಸ್ಥೆ ಇದೆ.

ಇದು ನಮ್ಮೆಲ್ಲರ ಕಾರ್ಯಕ್ರಮ. ಇದರಲ್ಲಿ ನೀವು ನಮ್ಮೊಂದಿಗಿದ್ದು ಭಗವತ್ಸೇವೆ ಸಲ್ಲಿಸಿ, ದೈವಾನುಗ್ರಹಕ್ಕೂ, ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ದಿವ್ಯಾಶೀರ್ವಾದಗಳಿಗೂ ಪಾತ್ರರಾಗಬೇಕೆಂದು ಕೋರುತ್ತೇವೆ.

ವಿ ಆರ್ ಗೌರೀಶಂಕರ್
**ಗೌರವಾಧ್ಯಕ್ಷರು,**
ಸದಸ್ಯರು, ಲಕ್ಷದೀಪೋತ್ಸವ ಸಮಿತಿ,
ಶ್ರೀಮಠ, ಶೃಂಗೇರಿ

